ಸಿ.ಸಿ. 949/2016

ಡಿ. ಡಬ್ಲ್ಯೂ ನಂ. - 1

ದಿನಾಂಕಃ 20.09.2022 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಪಾಟೀ ಸವಾಲುಃ ಪಿರ್ಯಾದಿದಾರರ ಪರ ವಕೀಲರಾದ ಶ್ರೀ ಎಂ.ಎಸ್.ಜಿ. ರವರಿಂದಃ

ನನ್ನ ಗಂಡ ಜೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದ ಈಗ ಏನು ಮಾಡುತ್ತಿದ್ದಾನೆ ನನಗೆ ಗೊತ್ತಿಲ್ಲ. 2013 ರವರೆಗೆ ನನ್ನ ಗಂಡ ನನ್ನ ಸಂಪರ್ಕದಲ್ಲಿ ಇದ್ದ ತದನಂತರದಲ್ಲಿ ನನ್ನ ಸಂಪರ್ಕದಲ್ಲಿ ಇರುವುದಿಲ್ಲ. ನನ್ನ ಮತ್ತು ನನ್ನ ಗಂಡನ ಮಧ್ಯೆ ವಿವಾಹ ವಿಚ್ಛೇದನ ಆಗಿರುವುದಿಲ್ಲ, ಆತನ ವಿರುದ್ದ ಜೀವನಾಂಶ ಕೇಳಿ ಅರ್ಜಿಯನ್ನು ದಾಖಲಿಸಿರುವುದಿಲ್ಲ. ನಾನು ಯಾವುದೇ ಉದ್ಯೋಗವನ್ನು ಮಾಡುವುದಿಲ್ಲ. ನನಗೆ 2 ಜನ ಮಕ್ಕಳು ಇರುತ್ತಾರೆ. ನಾನು ಮತ್ತು ನನ್ನ ಗಂಡ ಒಟ್ಟಿಗೆ ಅನ್ಯೂನ್ಯವಾಗಿ ಇದ್ದರೂ ಸಹ ಮತ್ತು ನಮ್ಮ ಜೀವನಕ್ಕೆ ಅವನೇ ಸಹಾಯ ಮಾಡುತ್ತಿದ್ದರೂ ಸಹ 2013 ರಿಂದ ಅವನು ನನ್ನ ಸಂಪರ್ಕದಲ್ಲಿ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ಯಾರದ್ದು ಎಂದು ಕೇಳಲಾಗಿ ಸಾಕ್ಷಿಯು ಸಂಪೂರ್ಣ ದಾಖಲೆಯನ್ನು ನೋಡದೇ ಸಹಿ ಯಾರದ್ದು ಎಂದು ಹೇಳಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ತಮ್ಮ ವಕೀಲರಿಗೆ ದಿಃ 13.06.2019 ರಂದು ನೀಡಿರುವ ವಕಾಲತ್ ನ್ನು ತೋರಿಸಲಾಗಿ ಅದರ ಮೇಲೆ ಇರುವ ಸಹಿ ನನ್ನದಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ದಿಃ 13.06.2019 ರಂದು ಶ್ರೀ ಎಂ.ಆರ್. ರಾಜಶೇಖರ್ ವಕೀಲರನ್ನು ನೇಮಿಸಿದ ಬಗ್ಗೆ ವಕಾಲತ್ತು ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ.ಸಾಕ್ಷಿ ಗೆ ದಿಃ 13.12.2017 ರಂದು ಶ್ರೀ ಎಸ್.ಎಂ. ಲೋಹಿತ್, ನಾಗರಾಜಯ್ಯ ಎಸ್.ಹೆಚ್., ಹರೀಶ್ ಕುಮಾರ್ ವಕೀಲರಿಗೆ ನೀಡಿದ ವಕಾಲತ್ ನ ಮೇಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದು ನನ್ನ ಸಹಿ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಮುಂದೆ ಸುಳ್ಳು ಕಾರಣಕ್ಕೆ ಪೂರಕವಾಗಿ ಒಂದು ವಕಾಲತ್ ನ ಮೇಲೆ ಸಹಿ ನನ್ನದಲ್ಲ ಇನ್ನೊಂದು ವಕಾಲತ್ ನ ಮೇಲಿರುವ ಸಹಿ ನನ್ನದು ಎಂದು ಸುಳ್ಳು ಸಾಕ್ಷಿ ಹೇಳುತ್ತಿತದೇನೆಂದರೆ ಸರಿಯಲ್ಲ. ಈಗ ನನ್ನ ಪರವಾಗಿ ಪ್ರಕರಣವನ್ನು ನಡೆಸುತ್ತಿರುವ ವಕೀಲರಿಗೆ ನಾನು ಎಷ್ಟು ಬಾರಿ ವಕಾಲತ್ ನ್ನು ಕೊಟ್ಟಿರುತ್ತೇನೆ ನನಗೆ ಈಗ

This is a True Copy of the Court Records Online. Authenticated @ districts.ecourtsindia.com/cnr/KASM620016732016/truecopy/order-4.pdf

www.ecourtsindia.com

ನೆನಪಿಲ್ಲ. ಎಸ್.ಎಂ.ಲೋಹಿತ್ ವಕೀಲರಿಗೆ ಈ ಪ್ರಕರಣದಲ್ಲಿ ನನ್ನ ಪರವಾಗಿ ಪ್ರಕರಣವನ್ನು ನಡೆಸಲು ವಕಾಲತ್‌ನ್ನು ಕೊಟ್ಟಿದ್ದೆ. ಈ ಪ್ರಕರಣದಲ್ಲಿ ಪಿರ್ಯಾದಿಯ ಪಾಟೀ ಸವಾಲನ್ನು ಶ್ರೀ ಎಂ.ಆರ್. ರಾಜಶೇಖರ್ ವಕೀಲರು ಮಾಡಿರುತ್ತಾರೆ ಎಂದರೆ ಸರಿ. ನಾನು ಕೊಟ್ಟ ಮಾಹಿತಿ ಮೇರೆಗೆ ಶ್ರೀ ಎಂ.ಆರ್.ರಾಜಶೇಖರ್ ವಕೀಲರು ಈ ಪ್ರಕರಣವನ್ನು ನಡೆಸುತ್ತಿದಾರೆ ಎಂದರೆ ಸರಿ. ಈ ಪ್ರಕರಣವನ್ನು ನಡೆಸಲು ನಾನು ಶ್ರೀ ಎಂ.ಆರ್. ರಾಜಶೇಖರ್ ವಕೀಲರಿಗೆ ಯಾವುದೇ ಬರವಣಿಗೆಯನ್ನು ನಾನು ಮಾಡಿ ಕೊಟ್ಟಿಲ್ಲ. ನಾನು ನ್ಯಾಯಾಲಯಕ್ಕೆ ಬಂದಾಗ ನನ್ನ ಪರವಾಗಿ ಶ್ರೀ ಎಂ.ಆರ್. ರಾಜಶೇಖರ್ ವಕೀಲರು ಪ್ರಕರಣವನ್ನು ನಡೆಸುತ್ತಾರೆಂದು ನಾನು ನ್ಯಾಯಾಲಯಕ್ಕೆ ಅರಿಕೆ ಮಾಡಿಕೊಂಡಿಲ್ಲ. ನಾನು ಶ್ರೀ ಎಂ.ಆರ್. ರಾಜಶೇಖರ್ ವಕೀಲರ ಕಚೇರಿಗೆ ಹೋದ ನಂತರ ಅವರು ನನ್ನ ಪರವಾಗಿ ಪ್ರಕರಣವನ್ನು ನಡೆಸುತ್ತಿದ್ದಾರೆಂದರೆ ಸರಿ. ನಾನು ಸಾಗರದ ಲೋಹಿಯಾ ನಗರದಲ್ಲಿ ವಾಸವಾಗಿರುತ್ತೇನೆ. ನಾನು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಪಿರ್ಯಾದಿಯು ತನ್ನ ವಕೀಲರ ಮುಖಾಂತರ ನೀಡಿದ ಕಾನೂನು ಬದ್ದ ನೋಟಿಸನ್ನು ನಾನು ಸ್ವೀಕರಿಸಿರುತ್ತೇನೆ. ಗಾರ್ಮೆಂಟ್ಸ್ ವಿಳಾಸಕ್ಕೆ ಕಳುಹಿಸಿದ ನೋಟೀಸ್ ನನಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿ. ಲೋಹಿಯಾ ನಗರ ವಿಳಾಸಕ್ಕೆ ಕಳುಹಿಸಿದ ನೋಟೀಸ್‌ನ್ನು ನಾನು ಸ್ವೀಕರಿಸಿರುತ್ತೇನೆ. ಸದರಿ ನೋಟೀಸನ್ನು ಸ್ವೀಕರಿಸಿದ ನಂತರ ನಾನು ಪಿರ್ಯಾದಿ ನನಗೆ ಸುಳ್ಳು ನೋಟೀಸ್ ನ್ನು ಕೊಟ್ಟಿದ್ದಾಳೆಂದು ಅದಕ್ಕೆ ಪ್ರತ್ಯುತ್ತರ ನೋಟಿಸನ್ನು ಕೊಡುವಂತೆ ನಾನು ಶ್ರೀ ಲೋಹಿತ್ ವಕೀಲರನ್ನು ಅಥವಾ ಶ್ರೀ.ಎಂ.ಆರ್.ಎಸ್. ವಕೀಲರನ್ನು ನಾನು ಸಂಪರ್ಕ ಮಾಡಿರುವುದಿಲ್ಲ. ನಾನು ಸಾಗರದ ಬಿ.ಹೆಚ್.ರಸ್ತೆಯ ಕೆನರಾ ಬ್ಯಾಂಕ್ ಶಾಖೆಯಲ್ಲಿ ಖಾತೆಯನ್ನು ಹೊಂದಿರುತ್ತೇನೆ ಎಂದರೆ ಸರಿ, ನನ್ನ ಖಾತೆಗೆ ನಾನು ಒಂದು ಚೆಕ್ ಬುಕ್ ಸಹ ಪಡೆದಿದ್ದೆ ಎಂದರೆ ಸರಿ. ಚೆಕ್ ನಂ.847281 ನನಗೆ ಸಂಬಂಧಿಸಿದ ಚೆಕ್ ಎಂದರೆ ಸರಿ. ಇದೇ ಚೆಕ್ ನ್ನು ನಾನು ದೀಪಾ ರವರಿಗೆ ಕೊಟ್ಟಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪಿರ್ಯಾದಿಯ ಬಳಿ 30 ಸಾವಿರ ರೂಪಾಯಿ ಸಾಲವನ್ನು ಕೇಳಿದ್ದೆ ಆದರೆ ನಾನು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವುದಿಲ್ಲ ಹಾಗೂ ನನ್ನ ಹೆಸರಿನಲ್ಲಿ ಚೆಕ್ ಬುಕ್ ಇರುವುದಿಲ್ಲ, ಭದ್ರತೆಗಾಗಿ ಚೆಕ್ ನ್ನು ನೀಡಿದರೆ ಮಾತ್ರ ಸಾಲವನ್ನು ಕೊಡುತ್ತೇನೆಂದು ಹೇಳಿದ ಕಾರಣ, ಪಿರ್ಯಾದುದಾರಳೇ

This is a True Copy of the Court Records Online. Authenticated @ districts.ecourtsindia.com/cnr/KASM620016732016/truecopy/order-4.pdf

ಸ್ವತಃ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು ನನ್ನ ಖಾತೆಗೆ ನೀಡಿರುವ ಚೆಕ್ ಬುಕ್ ನಲ್ಲಿರುವ ಒಂದು ಚೆಕ್‌ನ್ನು ಭದ್ರತೆಗಾಗಿ ಪಿರ್ಯಾದಾರಳಿಗೆ ನೀಡಿರುತ್ತೇನೆ. ಪಿರ್ಯಾದಿದಾರಳು ನನ್ನ ಹೆಸರಿನಲ್ಲಿ ದಿಃ 07.01.2015 ರಂದು ಖಾತೆಯನ್ನು ತೆರೆದಿರುತ್ತಾಳೆ. ನಾನು ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ಬೇರೆ ಊರಿಗೆ ಹೋದಾಗ ನನ್ನ ಮನೆಯ ಖರ್ಚಿಗೆ ನಾನು ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಶಾಖೆಗೆ ಹಣವನ್ನು ಜಮೆ ಮಾಡುತ್ತಿದ್ದ ಅದನ್ನು ನಾನು ಖಾತೆಯಿಂದ ತೆಗೆಸುತ್ತಿದ್ದೆ. ಆದ್ದರಿಂದ ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. ಪಿರ್ಯಾದಿದಾರಳು ನನ್ನ ಹೆಸರಿಗೆ ಖಾತೆಯನ್ನು ತೆಗೆದು, ನನ್ನ ಖಾತೆಗೆ ನೀಡಿದ ಚೆಕ್ ನ್ನು ಪಿರ್ಯಾದಿದಾರಳಿಗೆ ನೀಡಿ ಅವಳಿಂದ 30 ಸಾವಿರ ರೂಪಾಯಿ ಹಣ ಪಡೆದ ಬಗ್ಗೆ ಯಾವುದೇ ಬರವಣಿಗೆ ಆಗಿಲ್ಲ ಆದರೆ ಚೆಕ್ ನ ಮೇಲೆ ಇರುವ ಸಹಿ ನನ್ನದು ಇದ್ದು ಉಳಿದ ಬರವಣಿಗೆ ನನ್ನದಾಗಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜೆಎಂಎಫ್‌ಸಿ, ಸಾಗರ

This is a True Copy of the Court Records Online. Authenticated @ districts.ecourtsindia.com/cnr/KASM620016732016/truecopy/order-4.pdf

www.ecourtsindia.com